O.S.No:191/2015
D.W.:1

ದಿನಾಂಕ 27-02-2025 ರಂದು ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ .ಪಿ.ಐ.ಬಿ. ವಕೀಲರಿಂದಃ**

ಈ ಕೇಸಿನಲ್ಲಿ ವಾದಿಯವರು ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿಲ್ಲ. ನಾನು ನೋಡದ ಕಾರಣ ಅದರ ಸತ್ಯಾಸ್ಯತೆಯ ಬಗ್ಗೆ ನನಗೆ ಹೇಳಲು ಸಾಧ್ಯವಿಲ್ಲ. ವಾಸುದೇವ ಆಚಾರ್ಯರವರು ಸಾಯುವ 10-12 ವರ್ಷಗಳ ಮುಂಚೆ ಬಂದು ನನ್ನ ಜೊತೆ ವಾಸವಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಸಾಯುವ ಕೆಲವೇ ದಿನಗಳ ಮುಂಚೆ ಬಂದಿದ್ದರು ಎಂದರೆ ಸರಿಯಲ್ಲ. ಅವರು ದಾವಾ ಜಾಗದಲ್ಲಿ ಇದ್ದ ಮನೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ವಾಸುದೇವ ಆಚಾರ್ಯರವರು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡುತ್ತೇನೆ ಎಂದು ಒಪ್ಪಿ ನಿ.ಪಿ.3 ರಂತೆ ಕರಾರನ್ನು ಮಾಡಿಕೋಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ 35,000/-ರೂ. ಹಣವನ್ನು ಮುಂಗಡವಾಗಿ ನೀಡಿದ್ದರು ಎಂದರೆ ಸರಿಯಲ್ಲ. ಇದರ ಹೊರತಾಗಿ ಸದರಿ ದಾವಾ ಆಸ್ತಿ ವಾದಿಗೆ ಹೋಗಬೇಕೆಂದು ನಿ.ಪಿ.6 ರ ಪ್ರಕಾರ ವೀಲುನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.3 ಮತ್ತು 6 ನ್ನು ವಾಸುದೇವ ಆಚಾರ್ಯರವರು ಸ್ವ ಇಚ್ಚೆಯಿಂದ ವಾದಿಯ ಪರವಾಗಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ವಾಸುದೇವ ಆಚಾರ್ಯರವರು ನನ್ನ ಹೆಸರಿಗೆ ವೀಲುನಾಮೆ ಬರೆದಿರುತ್ತಾರೆ ಎಂದು ನಾನು ಸಾಧನೆ ಮಾಡಿರುವುದಿಲ್ಲ. ನಾನು ಅಂತಹ ಸಾಧನೆ ಮಾಡಿದ್ದರೂ ಕೂಡಾ ಅದು ಸುಳ್ಳು ಸಾಧನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಹಕ್ಕು ಸಂಪೂರ್ಣ ನಿ.ಪಿ.6 ರ ಮೇಲೆ ವಾದಿಗೆ ಇರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಹೆಸರಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸದರಿ ದಾಖಲೆಗಳ ಆಧಾರದ ಮೆಲೆ RTC ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.
ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.

O.S.No:191/2015
D.W.:1